

ಚಳಿ ದೃಢಮಾಡುತ್ತಿತ್ತು. 'ಚಳಿ ಈಗ ಆಗತಾ ಇದೆ. ಒಂದಿಷ್ಟೂ ಸದ್ದಿಲ್ಲ ಅಂತ ವಿಚಿತ್ರ ಅನಿಸುತ್ತಿರಬೇಕು, ಹೊದಿಕೆ ಬಿದ್ದು ಹೋಯಿತು ಅನಿಸತ್ತೆ' ಅಂದೆ. ಅವಳು ಮಾತಾಡಲಿಲ್ಲ. ಮತ್ತೆ ಕನ್ನಡಿ ಹತ್ತಿರ ಹೋದಳು, ನಾನು ಮತ್ತೆ ಕುರ್ಚಿಯಲ್ಲೆ ಹೊರಳಿದೆ. ಅವಳತ್ತ ಬೆನ್ನು ಮಾಡಿದ್ದೆ. ಅವಳನ್ನು ನೋಡದಿದ್ದರೂ ಅವಳೇನು ಮಾಡುತ್ತಿದ್ದಾಳೋ ತಿಳಿಯುತ್ತಿತ್ತು. ಈಗ ಮತ್ತೆ ಕನ್ನಡಿ ಮುಂದೆ ಕೂತಿದ್ದಳು, ನನ್ನ ಬೆನ್ನು ನೋಡುತ್ತಿದ್ದಳು. ನನ್ನ ಬೆನ್ನಿಗೆ ಕನ್ನಡಿಯ ಆಳವನ್ನು ಮುಟ್ಟುವ ಅವಳ ನೋಟಕ್ಕೆ ಸಿಕ್ಕುವಷ್ಟು ಸಮಯ ದೊರೆತಿತ್ತು. ಅವಳ ಕೈ ಮೊದಲು ತುಟಿಗೆ ಸರಿಯಾಗಿ ಕೆಂಪು ಮಜ್ಜನ ಮಾಡಿಸಿದೆಯೋ ಇಲ್ಲವೋ ಎಂದು ನೋಡುತ್ತ ಎರಡನೆಯ ಸಲ ಕೆಂಪು ಹಚ್ಚುವ ಮುನ್ನ ಕನ್ನಡಿಯ ಆಳಕ್ಕೆ ಹೋಗಿ ಬರಲು ಅವಳ ನೋಟಕ್ಕೂ ಸಮಯ ಸಿಕ್ಕಿತ್ತು. ನನ್ನ ಬೆನ್ನ ಹಿಂದೆ ಕೂತಿದ್ದ ಅವಳನ್ನು ಕಾಣಲಾರದ ಕುರುಡು ಕನ್ನಡಿಯ ಹಾಗೆ ನನ್ನೆದುರು ನಯವಾದ ಗೋಡೆಯಿದ್ದರೂ